(*b*) instead of this, whether they will consider the proposal that they should have the summer vacation after completion of their examinations ?

Sri N. M. KOTRABASAIAH SOGI (Deputy Minister for Education).—

(*a*) Yes.
(*b*) No.

ಶ್ರೀ ಗಂಗಾಬೋವಿ.—ಶಿಕ್ಷಣ ಸಂಸ್ಥೆಗಳಲ್ಲಿ ತರಬೇತಿ ಪಡೆಯುತ್ತಿರುವ ಉಪಾಧ್ಯಾಯರಿಗೆ ಬೇಸಿಗೆ ರಜ ಮುಗಿದನಂತರ ಪರೀಕ್ಷೆಗೆ ಕುಳಿತುಕೊಳ್ಳುವಂತೆ ಏರ್ಪಾಡು ಮಾಡಿದೆಯೇ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಹೌದು.

ಶ್ರೀ ಗಂಗಾಬೋವಿ.—ಹಾಗಾದರೆ ಅವರಿಗೆ ಪರೀಕ್ಷೆ ಮುಗಿದಮೇಲೆ ರಜ ಕೊಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ರಜ ಕೊಟ್ಟೇಕೊಡಬೇಕೆಂದು ಹೇಳುವುದಕ್ಕೆ ಅವರಿಗೆ ಹಕ್ಕಿಲ್ಲ. ಸಾಮಾನ್ಯವಾಗಿ ಅವರು ಶಾಲೆಗೆ ಹೋಗಿರುವುದಿಲ್ಲ. ಆದುದರಿಂದ ಪರೀಕ್ಷೆಗೆ ಮುಂಚೆ ರಜ ಕೊಡುವುದರಿಂದ ಅವರು ಪರೀಕ್ಷೆಗೆ ತಯಾರಾಗಲು ಅನುಕೂಲವಾಗುವುದು. ಆದುದರಿಂದ ರಜ ಮುಗಿದನಂತರ ಪರೀಕ್ಷೆ ನಡೆಸುತ್ತಿವೆ. ಪರೀಕ್ಷೆ ಮುಗಿದಮೇಲೆ ರಜ ಕೊಡುವ ವಿಚಾರವಿಲ್ಲ.

ಶ್ರೀ ಎನ್. ಎ. ಚನ್ನೇಗೌಡ.—ಬೇಸಿಗೆ ರಜ ಮುಗಿದನಂತರ ಪರೀಕ್ಷೆ ಏರ್ಪಾಡು ಮಾಡಿರುವುದಕ್ಕೆ ಮುಖ್ಯ ಕಾರಣವೇನು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸಾಮಾನ್ಯವಾಗಿ ಎಲ್ಲಾ ಪರೀಕ್ಷೆಗಳೂ ಏಪ್ರಿಲಿನಲ್ಲಿ ಬೇಳುವುದರಿಂದ, ಎಸ್. ಎಸ್.ಎಲ್. ಸಿ. ಪರೀಕ್ಷೆಗೆ ಕೂಡುವವರ ಸಂಖ್ಯೆ ವಿಸ್ತಾರವಾಗಿರುವುದರಿಂದ ಅದಕ್ಕೆ ಬೇಕಾದ ಎಗ್ಜಾಮಿನರ್ಸ್, ಸೂಪರ್‌ವೈಜರುಗಳು ಒದಗಬೇಕು, ಅವರು ಹೆಚ್ಚಾಗಿ ಬೇಕು. ಅದಕ್ಕೆ ಬೇಕಾದವರು ವಿದ್ಯಾ ಇಲಾಖೆಯಲ್ಲಿರುವುದರಿಂದ ಬೇರೆ ಸಮಯದಲ್ಲಿ ಅವರಿಗೆ ಪರೀಕ್ಷೆ ನಡೆಸುವುದು ಕಷ್ಟ. ಆದುದರಿಂದ ಮತ್ತು ಅದಕ್ಕಿಂತ ಹೆಚ್ಚಾಗಿ ಟಿ.ಟಿ.ಐ. ಟ್ರೈನಿಂಗ್‌ನಲ್ಲಿರುವವರಿಗೆ ರಜ ಕೊಟ್ಟರೆ ನಂತರ ಪರೀಕ್ಷೆಗೆ ಅನುಕೂಲ ಎಂದು ಭಾವಿಸಲಾಗಿದೆ.

Sri J. P. SARVESH.—Has the Government any proposal to reduce the training period from 2 years to 1 year for primary teachers ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂಥ ಪ್ರಪೋಸಲ್ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಬೇಸಿಗೆ ರಜ ಉಪಯೋಗಿಸಿಕೊಳ್ಳದೆ ಅವರು ಪರೀಕ್ಷೆಗೆ ತಯಾರಿ ಮಾಡಿಕೊಳ್ಳಬೇಕಾಗಿರುವುದರಿಂದ ಅವರಿಗೆ ಹೆಚ್ಚಿಗೆ ಅನುಕೂಲಮಾಡಲು ಸಾಧ್ಯವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಗತ್ಯವಾದ ಅನುಕೂಲವನ್ನೆಲ್ಲಾ ಮಾಡಲಾಗಿದೆ.

Dealings of K. R. Pet Co-operative Rice Mills

729. **Sri M. K. BOMME GOWDA** (Krishnarajpet).—

Will the Minister of State for Food and Civil Supplies be pleased to state :—

(*a*) whether the Krishnarajpet Co-operative Rice Mills are allowed to collect and store the levy paddy only ;

(*b*) whether the Management of Co-operative Mills have dealings with private individuals and selling rice to them ;

(SRI M. K. BOMME GOWDA)

(*c*) whether Government has given any permission to the management of the above mills to have private transactions of the Levy Paddy;

(*d*) if so, when such a permission was given (year and date)?

SRI B. VITHALDAS SHETTY (Minister of State for Food and Civil Supplies).—

(*a*) No. The Taluk Agriculture Produce Marketing Society, Krishnarajpet, in its capacity as Procurement Agent of Government collects and stores levy paddy until it is delivered to Government.

(*b*) Since the clause is generally worded, it may be clarified that there is no prohibition on Co-operative Mills to deal with private individuals.

(*c*) No.

(*d*) Does not arise.

ಶ್ರೀ ಎಂ. ಕೆ. ಬೊಮ್ಮೇಗೌಡ.—ಅಕ್ಕಿ ಗಿರಣಿಗಳವರು ಸರಕಾರಿ ಲೆವಿ ವಸೂಲುಮಾಡುವುದಲ್ಲದೆ ಬೇರೆ ಬತ್ತವನ್ನೂ ವಸೂಲುಮಾಡಿ ಇಂಡಿವಿಜುಯಲ್ಸ್‌ಗೆ ಮಾರುವುದಕ್ಕೆ ಅವರಿಗೆ ಅವಕಾಶ ಏದೆಯೇ?

†ಶ್ರೀ ಬಿ. ವಿಟ್ಠಲದಾಸಶೆಟ್ಟಿ.—ಸರ್ಕಾರಕ್ಕೆ ಕೊಡಬೇಕಾದ್ದನ್ನು ಕೊಡಬೇಕು, ಹಾಗೆ ಕೊಟ್ಟು ಬೇರೆ ಮಾರ್ಕೆಟ್ ವ್ಯವಹಾರ ಅವರು ಮಾಡಬಹುದು. ಸೇಕಡ 70 ಭಾಗ ಲೆವಿ ನಿಗದಿ ಮಾಡಿರುವುದನ್ನು ವಸೂಲುಮಾಡಿ ಬಾಕಿ ಖಾಸಗಿ ವ್ಯವಹಾರಮಾಡಬೇಕು.

ಶ್ರೀ ಎಂ. ಕೆ. ಬೊಮ್ಮೇಗೌಡ.—ಬತ್ತ ಇಳುವರಿ ಉಳಿಯುವುದನ್ನು ಖಾಸಗಿಯಾಗಿ ಅವರು ಮಾರಾಟಮಾಡಬಹುದೇ?

ಶ್ರೀ ಬಿ. ವಿಟ್ಠಲದಾಸಶೆಟ್ಟಿ.—ಅವರು ಹೇಳುವುದು ಅರ್ಥವಾಗುವುದಿಲ್ಲ. ನಾವೆಷ್ಟು ಬತ್ತ ಕೊಟ್ಟಿರುತ್ತೇವೆ ಅದನ್ನು ನಮ್ಮ ಇಳುವರಿ ಲೆಕ್ಕದ ಪ್ರಕಾರ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—250 ಮೂಟೆಯನ್ನು ಖಾಸಗೀ ವರ್ತಕರಿಗೆ ಮಾರಿದರೆ ಅದಕ್ಕೆ ಲೆಕ್ಕ ಹೇಗೆ ಸಿಕ್ಕುತ್ತದೆ?

ಶ್ರೀ ಬಿ. ವಿಟ್ಠಲದಾಸಶೆಟ್ಟಿ.—ಸರಕಾರದ ಬತ್ತ ಲೆವಿ ಪ್ರಕಾರ ನಾಕಾರ ಹಿಡಿದುಕೊಂಡ ನಂತರ ಉಳಿದಿರುವುದನ್ನು ಕಾನೂನು ಪ್ರಕಾರ ಲೆಕ್ಕಹಾಕತ್ತೇವೆ. ಅದಕ್ಕೆ ಪ್ರತ್ಯೇಕ ಪ್ರಶ್ನೆಹಾಕಿದರೆ ಹೇಳಬಹುದು.

ಶ್ರೀ ಐ. ಸೋಮಶೇಖರಪ್ಪ.—70 ಪರ್ಸೆಂಟ್ ಟಾರ್ಗೆಟ್ ನಿಗದಿ ಮಾಡಿರುವುದು ಏನಿವೆ ಈ ಲೆವಿ ರೀಟ್ ಮಾಡಿದವರಿಗೆ ಪ್ರೈವೇಟ್ ಬಿಸಿನೆಸ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಾ? ಕೊಟ್ಟಿದ್ದರೆ ಯಾವ ರೇಟ್‌ನಲ್ಲಿ ಖರೀದಿ ಮಾಡಬೇಕೆಂದು ನಿಗದಿ ಮಾಡಿದ್ದೀರಿ? ಅವರು ಮಾರ್ಕೆಟ್ ರೇಟ್‌ನಂತೆ ಖರೀದಿ ಮಾಡಬಹುದೇ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಆ ತರಹ ನಿರ್ಬಂಧ ಏನೂ ಇಲ್ಲ, ಮಾರ್ಕೆಟ್‌ನಲ್ಲಿ ಅವರಿಗೆ ಖುಷಿ ಬಂದ ಹಾಗೆ ಖರೀದಿ ಮಾಡಿಕೊಳ್ಳಬಹುದು.

ಶ್ರೀ ಎನ್. ಎ. ಚನ್ನೇಗೌಡ.—ತಾಲ್ಲೂಕು ವ್ಯವಸಾಯ ಮಾರ್ಕೆಟಿಂಗ್ ಸೊಸೈಟಿಯವರು ಲೆವಿ ಬತ್ತವನ್ನು ಕೊಳ್ಳುವಾಗ ಡ್ರೈಯೇಜ್‌ಗಾಗಿ ಎರಡು ಕೆ. ಜಿ. ಬತ್ತವನ್ನು ವಸೂಲು ಮಾಡುತ್ತಾ ಇರುವುದು ಗೊತ್ತೇ? ರೈತರಿಗೆ ಅದರಿಂದ ತೊಂದರೆಯಾಗುತ್ತಾ ಇರುವುದನ್ನು ಕೇಳುವವರೇ ಇಲ್ಲ.

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಈ ತರಹ ಬರಹ ಮೂಲಕ ಯಾವ ದೂರೂ ಬಂದಿಲ್ಲ.

ಶ್ರೀ ಎಂ. ಬಸವರಾಜ್.—ತಾವು ನಿಗದಿ ಮಾಡಿರುವ ಬತ್ತಕ್ಕಿಂತ ಜಾಸ್ತಿಯಾಗಿ ಬತ್ತ ಬಂದರೆ ಅದನ್ನು ತೆಗೆದುಕೊಳ್ಳಲಿಕ್ಕೆ ಪ್ರೈವೇಟ್ ಮಿರ್‌ನವರಿಗೆ ಅವಕಾಶ ಕೊಡುತ್ತೀರಾ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಈ ತನಕ ಆ ಥೋರಣ್ ಇಲ್ಲ, ಅದನ್ನು ಬೇಕಾದರೆ ಪರಿಶೀಲನೆ ಮಾಡೋಣ. ಈ ತನಕ ಸರ್ಕಾರದ ಥೋರಣ್ ಕೋ ಆಪರೇಟೀವ್ ಸೊಸೈಟಿಗಳಿಗೆ ಬೆಂಬಲ ಕೊಡಬೇಕು ಮತ್ತು ಅದರ ಮುಖಾಂತರ ಈ ಕೆಲಸ ಮಾಡಿಸಿಕೊಳ್ಳಬೇಕೆಂಬ ಥೋರಣ್ ಇದೆ.

ಶ್ರೀ ಗಂಗಾಬೋವಿ.—ತಾವು ನಿಗದಿ ಮಾಡಿರುವ ರೇವಿಯನ್ನು ಸಂಪೂರ್ಣವಾಗಿ ವಸೂಲು ಮಾಡಲು ತಮಗೆ ಹಕ್ಕು ಇದೆ. ರೇವಿ ಕೊಟ್ಟಮೇಲೆ ಸಾದಾರಣವಾಗಿ ಒಂದು ಕೆ.ಜಿ. ಅಕ್ಕಿಯನ್ನೂ ಕೂಡ ಹಳ್ಳಿಗಳಿಗೆ ಕೊಡುವುದಿಲ್ಲ ಇದಕ್ಕೆ ಕಾರಣವೇನು ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಹಳ್ಳಿಗೆ ಕೊಡುವುದಿಲ್ಲ ಅಂತ ಅನ್ನುವುದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಸರ್ಕಾರದ ಪ್ರಕ್ಯತ ಥೋರಣ್‌ಯ ಪ್ರಕಾರ ಹಳ್ಳಿಗೂ ಕೊಡಬೇಕಾಗುತ್ತದೆ.

Visit of Food Squad to Krishnarajpet

730. **Sri M. K. BOMME GOWDA** (Krishnarajpet).—

Will the Minister of State for Food and Civil Supplies be pleased to state :—

(*a*) the number of times, the Food Squad visited Krishnarajpet during the month of January, 1969 ;

(*b*) the number of villages they have visited and the number of houses they have sealed ;

(*c*) whether the Food Squad visited Singanahalli, Krishnarajpet ;

(*d*) if so, the quantity of paddy and ragi seized ?

Sri B. VITHALDAS SHETTY (Minister of State for Food and Civil Supplies).—

(*a*)	Twice.		
(*b*)	Villages visited	...	4
	Houses sealed	...	Nil
(*c*)	Yes.		
(*d*)	Paddy	...	267-80 qtls.
	Ragi	...	Nil.

ಶ್ರೀ ಎಂ. ಕೆ. ಬೊಮ್ಮೇಗೌಡ.—ಯಾವ ಊರಿನಲ್ಲೂ ಯಾವ ಮನೆಯನ್ನೂ ಮೊಹರು ಮಾಡಿಲ್ಲ ಎಂದು ಹೇಳಿದ್ದೀರಿ, ನಂಗನಹಳ್ಳಿ ಗ್ರಾಮದಲ್ಲಿ 2 ಮನೆಗಳನ್ನು ಮೊಹರು ಮಾಡಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

† ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಅದು ನಮ್ಮ ಅವಗಾಹನೆಗೆ ಬಂದಿಲ್ಲ, ತಾವು ಹೇಳುವುದು ಸರಿಯಲ್ಲ. ಅಲ್ಲಿ ಪೋಲೀಸ್‌ನವರು ಹೋಗಿದ್ದಾಗ ಕೇನುಗಳನ್ನು ಹಾಕಿದ್ದಾರೆ, ಎರಡು ಮನೆಗಳನ್ನು ಸೀಜ್ ಮಾಡಿದ್ದಾರೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಆ ಊರುಗಳಲ್ಲಿ ತಮಗೆ ಕೊಡಬೇಕಾದ ಇಳುವರಿ ಬತ್ತವನ್ನು ಕೊಟ್ಟಾದ ಮೇಲೆ ಅವರು ಹೋಗಿ ಇವತ್ತೋ ಆಥವಾ ನಾಳೆಯೋ ಡಿಕ್ಲರೇಷನ್ ಕೊಡುವ ಸಂದರ್ಭದಲ್ಲಿ ಅವರ ಮೇಲೆ ಕೇಸು ಮಾಡುವುದಕ್ಕೆ ಏನು ಆಗತ್ಯ ಇತ್ತು ?